ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.
<u>ಸಿ.ಸಿ. ನಂ.ಃ 476/2021</u>

.................................................................

CW 06
PW 08

| | | |
|---|---|---|
| ಹೆಸರು | ಃ | ಸಿದ್ದರಾಮಪ್ಪ ಹುಣಸಿಕಟ್ಟಿ |
| ತಂದೆಯ ಹೆಸರು | ಃ | ಲಕ್ಷ್ಮಣ (ಬಸವಂತಪ್ಪ) |
| ವಯಸ್ಸು | ಃ | 80 ವರ್ಷ |
| ಉದ್ಯೋಗ | ಃ | ರೈತಾಬಿ ಕೆಲಸ |
| ವಾಸಸ್ಥಳ | ಃ | ಅರ್ಲವಾಡ, ತಾಃ ಹಳಿಯಾಳ. |

ದಿನಾಂಕ 15-04-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆ**</u> ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ನನ ಮಗ. ಚಾಸಾ 2 ರಿಂದ 5 ರವರು ಪರಿಚಯ. ಚಾಸಾ 7 ರವರು ಹೆಂಡತಿ. ಚಾಸಾ 8 ನನ್ನ ತಮ್ಮನ ಮಗ. ಉಳಿದವರು ಪರಿಚಯವಿಲ್ಲ. ಆರೋಪಿ ನಮ್ಮ ಊರಿನವರು.

ನಾನು ಮತ್ತು ಚಾಸಾ 7 ರವರು ನಮ್ಮ ಮನೆಯಲ್ಲಿ ಕುಳಿತಿದ್ದಾಗ ಆರೋಪಿ ನಮ್ಮ ಮನೆಯ ಮೇಲೆ ಬಂದೂಕಿನಿಂದ ಗುಂಡು ಹಾರಿಸಿದ್ದ. ಅದರಿಂದಾಗಿ ನಮ್ಮ ಮನೆಯ ತಗಡು ಹರಿದವು. ಯಾವ ಕಾರಣಕ್ಕೆ ಹಾರಿಸಿದ ಎಂದು ನನಗೆ ಗೊತ್ತಿಲ್ಲ. ಅದರಿಂದಾಗಿ ನಮ್ಮ ಭಯ ಆಯಿತು. ನಮ್ಮ ಮಗನಿಗೆ ಸದರಿ ವಿಚಾರ ತಿಳಿಸಿದೆವು. ಆತನು ಪೊಲೀಸರಿಗೆ ದೂರು ನೀಡಿದ. ಈ ವಿಚಾರವಾಗಿ ನಾನು ಹೇಳಿಕೆ ನೀಡಿದ್ದೇನೆ.

ಸಾಕ್ಷಿಗೆ ನಿಪಿ 4 ಅನ್ನು ತೋರಿಸಲಾಗಿ ಅದರಲ್ಲಿ ಕಾಣುವ ತಗಡು ನಮ್ಮ ಮನೆಯ ತಗಡು ಎನ್ನುತ್ತಾರೆ. ಬಂದೂಕನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 20-07-2016 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ದಿನಾಂಕ 19-07-2016 ರಂದು ನೀವು ಮತ್ತು ನಿಮ್ಮ ಹೆಂಡತಿ ಮನೆಯಲ್ಲಿ ಇದ್ದಾಗ ------------------ ಲುಕ್ಸಾನು ಪಡಿಸಿರುತ್ತಾನೆ ಅದಕ್ಕಾಗಿ ಅವನ ವಿರುದ್ಧ ಮಗ ಮಂಜುನಾಥ ಈತನು ಈ ದೂರು ಕೊಟ್ಟಿದ್ದು ಇರುತ್ತದೆ ಎಂದು ನುಡಿದಿರುತ್ತೀರಿ ಎಂದರೆ ಸರಿ.

**<u>ಪಾಟೀ ಸವಾಲು :</u>** ಆರೋಪಿ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 1 ನನ್ನ ಮಗ. ಚಾಸಾ 7 ನನ್ನ ಹೆಂಡತಿ. ಘಟನೆಯಾದ ಯಾವ ದಿನಾಂಕದಂದು ಆಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ಘಟನೆಯದಾಗ ಸಂಜೆ 05-00 ರಿಂದ 05-30 ಆಗಿತ್ತು. ಘಟನೆಯದಾಗ ನನ್ನ ಮಗ ಅಳ್ನಾವರಕ್ಕೆ ಸಂತೆ ಮಾಡಲು ಹೋಗಿದ್ದ ಎಂದರೆ ಸರಿ. ಚಾಸಾ 1 ರವರು ಘಟನೆಯನ್ನು ನೋಡಿಲ್ಲ ಎಂದರೆ ಸರಿ. ಚಾಸಾ 1 ರವರು ಮನೆಗೆ ಬಂದಾಗ ಸಂಜೆ 07-00 ರಿಂದ 08-00 ಗಂಟೆ ಆಗಿತ್ತು. ನಮ್ಮ ಮನೆಯ ಸಂಖ್ಯೆ ಹೇಳಲು ಆಗುವುದಿಲ್ಲ. ಘಟನಾ ಜಾಗದ ಚಕ್ಕು ಬಂದಿ ಹೇಳಲು ಆಗುವುದಿಲ್ಲ. ನಿಮ್ಮ ಮನೆ ಉತ್ತರ ದಿಕ್ಕಿಗೆ ಮುಖ ಮಾಡಿ ಇದೆ ಎಂದರೆ ಸರಿ. ನಿಮ್ಮ ಮನೆಗೆ ತಾಗಿ 50 ಪೂಟ ಹಿತ್ತಲು ಜಾಗ ಇದೆ ಎಂದರೆ ಸರಿ. ಆ ಹಿತ್ತಲಿಗೆ ತಾಗಿ ದಕ್ಷಿಣ ದಿಕ್ಕಿಗೆ ಆರೋಪಿತನ ಮನೆ ಇದೆ ಎಂದರೆ ಸರಿ. ಘಟನೆಯಿಂದಾಗಿ 5-6 ತಗಡುಗಳಿಗೆ ಹಾನಿಯಾಗಿತ್ತು. ತಗಡುಗಳಿಗೆ ಎಷ್ಟು ರಂಧ್ರಗಳು ಬಿದ್ದಿದ್ದವು ಎಂದರೆ ಸಾಕ್ಷಿ ಅಂದಾಜು ಒಂದು ತಗಡಿಗೆ ಅಂದಾಜು 10-20 ರಂಧ್ರಗಳು ಬಿದ್ದಿದ್ದವು. ರಂಧ್ರಗಳು ಬಿದ್ದಿದ್ದ ತಗಡುಗಳನ್ನು ಪೊಲೀಸರಿಗೆ ತೋರಿಸಿದ್ದೇವೆ. ಪಂಚನಾಮೆಯ ಸಮಯದಲ್ಲಿ ಪೊಲೀಸರು ತಗಡುಗಳನ್ನು ಜಪ್ತುಪಡಿಸಿಕೊಂಡಿದ್ದಾರೆಯೇ ಎಂದರೆ ಸಾಕ್ಷಿ ಜಪ್ತುಪಡಿಸಿಕೊಂಡಿದ್ದಾರೆ ಎನ್ನುತ್ತಾರೆ. ನಮ್ಮ ಮನೆಯ ಹಿಂದಿನ ತಗಡುಗಳಿಗೆ ರಂಧ್ರಗಳು ಬಿದಿದ್ದವು ಎನ್ನುತ್ತಾರೆ. ಯಾವುದೇ ಘಟನೆ ಆಗಿಲ್ಲ, ಆರೋಪಿ ಯಾವುದೇ ತಪ್ಪು ಮಾಡಿಲ್ಲ ಮತ್ತು ಲುಕ್ಸಾನು ಪಡಿಸಿಲ್ಲ, ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ, ಮು.ಮಾ. 1 ಅನ್ನು ನಿಮ್ಮ ಸಮಕ್ಷಮ ಜಪ್ತುಪಡಿಸಿಕೊಂಡಿಲ್ಲ, ಚಾಸಾ 1 ರವರು ನೀಡಿದ ದೂರಿಗೆ ಅನುಕೂಲ ಆಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.